# ಕೇಂದ್ರ ಉತ್ಪಾದನಾ ಶುಲ್ಕಗಳ (ಪೂರ್ವಾನ್ವಯ ವಿನಾಯಿತಿ) ಅಧಿನಿಯಮ, 1986

**(1986ರ ಅಧಿನಿಯಮ ಸಂಖ್ಯೆ 45)**

**[17-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 20ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 50ನೇ ಪುಟದಲ್ಲಿ ಪ್ರಕಟಿತ]**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು
2. ಕೆಲವು ಅಧಿಸೂಚನೆಗಳಿಗೆ ಪೂರ್ವಾನ್ವಯ ಪರಿಣಾಮ

**ಕೇಂದ್ರ ಉತ್ಪಾದನಾ ಶುಲ್ಕಗಳ (ಪೂರ್ವಾನ್ವಯ ವಿನಾಯಿತಿ) ಅಧಿನಿಯಮ, 1986**

**(1986ರ ಅಧಿನಿಯಮ ಸಂಖ್ಯೆ 45)**

[8ನೇ ಸೆಪ್ಟೆಂಬರ್ 1986]

ಉತ್ಪಾದನಾ ಸುಂಕಗಳ ವಿನಾಯಿತಿಗೆ ಸಂಬಂಧಪಟ್ಟ ಕೆಲವು ಅಧಿಸೂಚನೆಗಳಿಗೆ ಪೂರ್ವಾನ್ವಯ ಪರಿಣಾಮ ನೀಡುವುದನ್ನು ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

**1. ಚಿಕ್ಕ ಹೆಸರು.-** (1) ಈ ಅಧಿನಿಯಮವನ್ನು ಕೇಂದ್ರ ಉತ್ಪಾದನಾ ಸುಂಕಗಳ (ಪೂರ್ವಾನ್ವಯ ವಿನಾಯಿತಿ) ಅಧಿನಿಯಮ, 1986 ಎಂದು ಕರೆಯತಕ್ಕುದು.

**2. ಕೆಲವು ಅಧಿಸೂಚನೆಗಳಿಗೆ ಪೂರ್ವಾನ್ವಯ ಪರಿಣಾಮ.-** (1) ಕೇಂದ್ರ ಉತ್ಪಾದನಾ ಸುಂಕಗಳ ನಿಯಮಗಳು, 1944ರ 8ನೆಯ ನಿಯಮದ (1)ನೆಯ ಉಪನಿಯಮದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ,-

(ಎ) ಕೇಂದ್ರ ಉತ್ಪಾದನಾ ಸುಂಕ ಪದ್ಧತಿ ಅಧಿನಿಯಮ, 1985 (1986ರ 5), ಅಧಿಕ ಉತ್ಪಾದನಾ ಸುಂಕಗಳ (ಜವಳಿ ಮತ್ತು ಜವಳಿ ವಸ್ತುಗಳ) ತಿದ್ದುಪಡಿ ಅಧಿನಿಯಮ, 1985 (1986ರ 6) ಅಥವಾ ಅಧಿಕ ಉತ್ಪಾದನಾ ಸುಂಕಗಳ (ವಿಶೇಷ ಮಹತ್ವದ ಸರಕುಗಳ) (ತಿದ್ದುಪಡಿ) ಅಧಿನಿಯಮ, 1985 (1986ರ 7) ಇವುಗಳ ಮೂಲಕ ಉತ್ಪಾದನಾ ಸುಂಕಗಳ ದರಗಳಲ್ಲಿ ಮಾಡಿರುವ ಬದಲಾವಣೆಗಳು ಏನೇ ಇದ್ದಾಗ್ಯೂ, ಕೆಲವು ಸರಕುಗಳ ಸಂಬಂಧದಲ್ಲಿ ಉತ್ಪಾದನಾ ಸುಂಕಗಳ ಪರಿಣಾಮಕಾರಿ ದರಗಳನ್ನು 1986ರ ಫೆಬ್ರವರಿ 28ನೆಯ ದಿನಾಂಕಕ್ಕಿಂತ ಮುಂಚೆ ಇದ್ದ ಮಟ್ಟದಲ್ಲಿ ಉಳಿಸಿಕೊಂಡು ಬರುವ ಉದ್ದೇಶಕ್ಕಾಗಿ; ಅಥವಾ

(ಬಿ) ಹಣಕಾಸು ವಿಧೇಯಕ, 1986ರ ಮೂಲಕ ಉತ್ಪಾದನಾ ಸುಂಕಗಳ ದರಗಳಲ್ಲಿ ಮಾಡಿರುವ ಬದಲಾವಣೆಗಳು ಏನೇ ಇದ್ದಾಗ್ಯೂ, ಕೆಲವು ಸರಕುಗಳ ಸಂಬಂಧದಲ್ಲಿ ಉತ್ಪಾದನಾ ಸುಂಕಗಳ ಪರಿಣಾಮಕಾರಿ ದರಗಳನ್ನು 1986ರ ಮಾರ್ಚ್ 1ನೆಯ ದಿನಾಂಕಕ್ಕಿಂತ ಮುಂಚೆ ಇದ್ದ ಮಟ್ಟದಲ್ಲಿ ಉಳಿಸಿಕೊಂಡು ಬರುವ ಉದ್ದೇಶಕ್ಕಾಗಿ-

-1986ರ ಮಾರ್ಚ್ 3ನೆಯ ದಿನಾಂಕದಂದು ಅಥವಾ ಆ ತರುವಾಯ, ಆದರೆ 1986ರ ಆಗಸ್ಟ್ 8ನೆಯ ದಿನಾಂಕಕ್ಕಿಂತ ಮುಂಚೆ ಭಾರತ ಸರ್ಕಾರದ ಹಣಕಾಸು ಮಂತ್ರಾಲಯವು (ರಾಜಸ್ವ ಇಲಾಖೆ) ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯು, ಅಂಥ ಸರಕುಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅಂಥ ಅಧಿಸೂಚನೆಯು 1986ರ ಮಾರ್ಚ್ 1ನೆಯ ದಿನಾಂಕದಂದು ಮತ್ತು ಆ ದಿನಾಂಕದಿಂದ ಪರಿಣಾಮವುಳ್ಳದ್ದೆಂದು ಮತ್ತು ಯಾವಾಗಲೂ ಪರಿಣಾಮವುಳ್ಳದ್ದಾಗಿದೆಯೆಂದು ಭಾವಿಸತಕ್ಕುದು.

(2) ಯಾವ ಉತ್ಪಾದನಾ ಸುಂಕಗಳನ್ನು ಸಂಗ್ರಹಿಸಲಾಗಿದೆಯೋ ಮತ್ತು ಸದರಿ ಅಧಿಸೂಚನೆಯು ಎಲ್ಲ ನಿರ್ದಿಷ್ಟ ಕಾಲಗಳಲ್ಲಿ ಜಾರಿಯಲ್ಲಿದ್ದಿದ್ದರೆ ಯಾವ ಉತ್ಪಾದನಾ ಸುಂಕಗಳನ್ನು ಸಂಗ್ರಹಿಸಲಾಗುತ್ತಿದ್ದಿಲ್ಲವೋ, ಆ ಸುಂಕಗಳನ್ನು ಮರುಪಾವತಿ ಮಾಡತಕ್ಕುದು:

ಪರಂತು, ಸಂದರ್ಭಾನುಸಾರ ಕೇಂದ್ರ ಉತ್ಪಾದನಾ ಸುಂಕಗಳ ನಿಯಮಗಳು, 1944ರ 56ಎ ಅಥವಾ 57ಎ ನಿಯಮದ ಮೇರೆಗೆ ಉತ್ಪಾದನಾ ಸುಂಕವನ್ನು ಜಮೆ ಮಾಡಲಾಗಿರುವಲ್ಲಿ ಅಥವಾ ಯಾವ ಸರಕುಗಳ ಮೇಲೆ ಉತ್ಪಾದನಾ ಸುಂಕಗಳನ್ನು ಸಂದಾಯ ಮಾಡಲಾಗಿದೆಯೋ ಅಂತಹ ಸರಕುಗಳನ್ನು ಸುಂಕಗಳ ಸೋಡಿಯನ್ನು ಕ್ಲೇಮು ಮಾಡಿ ರಫ್ತು ಮಾಡಿರುವಲ್ಲಿ, ಯಾವುದೇ ಅಂಥ ಮರುಪಾವತಿಯನ್ನು ಅನುಮತಿಸತಕ್ಕುದಲ್ಲ.

(3) ಯಾವ ಉತ್ಪಾದನಾ ಸುಂಕಗಳನ್ನು ಸಂದಾಯ ಮಾಡಬೇಕಾಗಿದೆಯೋ ಮತ್ತು ಸದರಿ ಅಧಿಸೂಚನೆಯು ಎಲ್ಲ ನಿರ್ದಿಷ್ಟ ಕಾಲಗಳಲ್ಲಿ ಜಾರಿಯಲ್ಲಿದ್ದಿದ್ದರೆ ಯಾವ ಉತ್ಪಾದನಾ ಸುಂಕಗಳನ್ನು ಹಾಗೆ ಸಂದಾಯ ಮಾಡಲಾಗುತ್ತಿದ್ದಿಲ್ಲವೋ ಆ ಸುಂಕಗಳನ್ನು ಸಂದಾಯ ಮಾಡುವ ಅಗತ್ಯವಿಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಉತ್ಪಾದನಾ ಸುಂಕದ ಮರುಪಾವತಿಯನ್ನು ಕ್ಲೇಮು ಮಾಡುವ ಯಾವನೇ ವ್ಯಕ್ತಿಯು ಅಂತಹ ಸುಂಕದ ಮರುಪಾವತಿಗಾಗಿ ಈ ಅಧಿನಿಯಮದ ಪ್ರಾರಂಭದಿಂದ ಆರು ತಿಂಗಳ ಅವಧಿಯು ಮುಕ್ತಾಯಗೊಳ್ಳುವ ಮುಂಚೆ ಕೇಂದ್ರ ಉತ್ಪಾದನಾ ಸುಂಕದ ಸಹಾಯಕ ಕಲೆಕ್ಟರನಿಗೆ ಅರ್ಜಿಯನ್ನು ಸಲ್ಲಿಸಬಹುದು.

*　　　*　　　*